# CCE PR

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2017**

**S. S. L. C. EXAMINATION, JUNE, 2017**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 15. 06. 2017 ] ಸಂಕೇತ ಸಂಖ್ಯೆ : **01-K**

Date : 15. 06. 2017 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

[ ಗರಿಷ್ಠ ಅಂಕಗಳು : 125

[ Max. Marks : 125

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** **(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)** **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** **(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ, ಅಣುಶಕ್ತಿ, ಇವುಗಳ ಬಗ್ಗೆ ತಿಳಿದುಕೊಂಡಿರುತ್ತಾರೆ. | |
| 2. | ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ದೊಡ್ಡ ಸಮಸ್ಯೆಯಾಗುತ್ತದೆ. | |
| 3. | ಬುಕ್ಕರಾಯನ ರಾಜ್ಯಭಾರಕಾಲದಲ್ಲಿ ವೈಷ್ಣವರಿಗು ಜೈನರಿಗೂ ಸಂವಾದ ನಡೆಯಿತು. | |
| 4. | ವಿಶ್ವೇಶ್ವರಯ್ಯನವರ ಪೂರ್ವಜರು ಮೂಲತಃ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆ ಗಿಡ್ಡಲೂರು ತಾಲೂಕಿನ 'ಮೋಕ್ಷಗೊಂಡಂ' ಅಗ್ರಹಾರಕ್ಕೆ ಸೇರಿದವರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 5. | 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಬರೆದವರು ಕುವೆಂಪು. | |
| 6. | ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ. | |
| 7. | ಅರ್ಜುನನನ್ನು ಗಾಂಡೀವಿ ಎಂದು ಕರೆಯುತ್ತಾರೆ. | |
| 8. | ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ. | |
| 9. | ಹಕ್ಕಿಯ ಗರಿಯಲ್ಲಿ ಕರಿ, ಬಿಳಿ, ಕೆಂಪು, ಹೊನ್ನಿನ ಬಣ್ಣಗಳಿವೆ. | |
| 10. | ಸತಿಪತಿಗಳೊಂದಾಗಿ ಮಾಡಿದ ಭಕ್ತಿ ಶಿವನಿಗೆ ಹಿತವಾಗಿರುವುದೆಂದು ಜೇಡರ ದಾಸಿಮಯ್ಯ ಹೇಳಿದ್ದಾರೆ. | |
| 11. | ಜಿ.ಎಸ್. ಶಿವರುದ್ರಪ್ಪನವರ ಪ್ರಕಾರ ನದಿ ಜಲಗಳು ಕಲುಷಿತಗೊಂಡಿವೆ. | |
| 12. | ನಕುಲ–ಸಹದೇವರು ಅಶ್ವಿನೀ ದೇವತೆಗಳ ವರಬಲದಿಂದ ಜನಿಸಿದರು. | |
| 13. | ದು. ಸರಸ್ವತಿಯವರು ಸಂಕಟಕ್ಕೆ ಗಡಿ ಇಲ್ಲ ಎಂದಿದ್ದಾರೆ. | |
| 14. | ದು. ಸರಸ್ವತಿಯವರು ಮಾನವನನ್ನು ಮಣ್ಣಿನ ಮಾಲಿಕ ಎಂದಿದ್ದಾರೆ. | |
| 15. | ಸು.ರಂ. ಎಕ್ಕುಂಡಿಯವರು ವ್ಯಾಮೋಹವನ್ನು ತೊರೆದು ಬಾಳಬೇಕೆಂದಿದ್ದಾರೆ. | |
| 16. | ಮೊಟ್ಟೆಯೊಡೆದು ಹೊರಬಂದ ಮುದ್ದು ಮರಿಗಳ ಮಧುರ ಸದ್ದು ಕೇಳಿ ಪಾರಿವಾಳಗಳಿಗೆ ಆನಂದವಾಯಿತು. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | ನಾಸ್ತಿಕ ಸಾಗರಕ್ಕೆ ಮಹಾ ಬಡವಾಮುಖಾಗ್ನಿಯಂತಿರುವ ಶ್ರೀರಂಗರಾಜ ಚರಣಗಳಿಗೆ ಮೂಲದಾಸರಾಗಿರುವ, ಶ್ರೀವಿಷ್ಣುಲೋಕ ಮುನಿಮಂಟಪಕ್ಕೆ ಕರೆದೊಯ್ಯಲು ಮಾರ್ಗದಾಯಿಯಾಗಿರುವ, ಯತಿರಾಜರಿಗೆ ರಾಜರಾಗಿರುವ ರಾಮಾನುಜರಿಗೆ ಜಯವಾಗಲಿ ಎಂದು ಅವರ ಗುಣ ವಿಶೇಷತೆಯನ್ನು ಕೊಂಡಾಡಲಾಗಿದೆ. | |
| 18. | ವೈಷ್ಣವರೂ ಜೈನರೂ ಒಂದು ಭೇದವಾಗಿ ಕಾಣಲಾಗದು. ಬೆಳಗೊಳದಲ್ಲಿ ವೈಷ್ಣವರ ಅಂಗರಕ್ಷಣೆಗಾಗಿ, ಜೈನರ ಬಾಗಿಲುಗಟ್ಟಲೆಯಾಗಿ ಮನೆಮನೆಗೆ ವರ್ಷಕ್ಕೆ ಎತ್ತಿದ 1 ಹಣದಲ್ಲಿ ಇಪ್ಪತ್ತು ಆಳನ್ನು ನೇಮಿಸಿ, ಉಳಿದ ಹಣವನ್ನು ನಾಡಿನ ಜೀರ್ಣಜಿನಾಲಯಗಳಿಗೆ ಬಳಸುವುದು. ಈ ಕಟ್ಟಳೆಯನ್ನು ಎಲ್ಲರೂ ಪಾಲಿಸತಕ್ಕದ್ದು ಮೀರಿದವರು ರಾಜದ್ರೋಹಿ ಎನಿಸುವರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 19. | ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ವಿಶ್ವೇಶ್ವರಯ್ಯನವರು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್‌ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು. | |
| 20. | ದೇವನೂರರು, ಈ ಸಹಸ್ರಮಾನದಲ್ಲಿ ಕಾಣುವ ಹನ್ನೆರಡನೆಯ ಶತಮಾನದ ವಚನ ಆಂದೋಲನದ ಇಪ್ಪತ್ತೈದು ವರ್ಷಗಳನ್ನು ಕುರಿತು, ಹುಡುಕಿದರೂ ಜಗತ್ತಿನಲ್ಲೇ ಕರ್ನಾಟಕದ ಈ ಮಾದರಿ ಬಹುಶಃ ಎಲ್ಲೂ ಸಿಗುವುದಿಲ್ಲವೇನೋ! ಈ ವಚನಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದೇನೋ. ಇದು ಜಾತಿ ಆದರೆ, ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ ಎಂದಿದ್ದಾರೆ. | |
| 21. | ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತಾ ಕೂಡಿಸುತ್ತಾ ಹೋದುದು. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯವಾಗಿದೆ. | |
| 22. | ವ್ಯಾಪಾರದಿಂದ ಗಳಿಸಿದ ಹೊನ್ನೆಲ್ಲವನ್ನು ಮನೆಯಲ್ಲಿ ಇಟ್ಟುಕೊಂಡು, ಸ್ವೇಚ್ಛೆಯಾಗಿರಲು ಸಾಧ್ಯವಿಲ್ಲವಾದುದರಿಂದ, ವ್ಯಯಕ್ಕೆ ಬೇಕಾದ ಸ್ವಲ್ಪ ಹೊನ್ನನ್ನು ತೆಗೆದುಕೊಂಡು ಉಳಿದುದನ್ನು ಇಲ್ಲಿಯೇ ಹೂತಿಡೋಣ ಎಂಬ ಸಲಹೆಯನ್ನು ಧರ್ಮಬುದ್ಧಿಗೆ ದುಷ್ಟಬುದ್ಧಿಯು ನೀಡಿದನು. | |
| 23. | 'ಮಡಿಯಬೇಕಾದರೆ ಮಾಡಿಯೇ ಮಡಿಯುತ್ತೇನೆ.' ಎಂದು ನಿಶ್ಚಯಿಸಿಕೊಂಡ ಶಾನುಭೋಗರು ಹುಲಿಯಿಂದ ರಕ್ಷಣೆ ಪಡೆಯಲು ತಮ್ಮ ಬಳಿ ಇದ್ದ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕವೊಂದೇ, ಅದನ್ನೇ ಹುಲಿಯ ಮುಖದತ್ತ ಎಸೆದು, ಬಳಲಿಕೆಯಿಂದ ಜಡವಾಗಿದ್ದ ಮನಸ್ಸಿಗೆ ಪರಿಸ್ಥಿತಿಯ ಅರಿವಾಗಲು ಅರೆನಿಮಿಷ ಹಿಡಿಯುವುದು. ಆ ಅರೆನಿಮಿಷದಲ್ಲಿ ಶಾನುಭೋಗರು ಈ ರೀತಿ ಪ್ರಾರ್ಥಿಸುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆಗೆ ಧಾವಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೇ. ಸದ್ವಂಶದಲ್ಲಿ ಜನಿಸಿದ, ಪುಣ್ಯಕೋಟಿಯನ್ನು ತಿನ್ನದೆ ತಾನೇ ಪ್ರಾಣಬಿಟ್ಟ ಆ ಹುಲಿಯ ಮೊಮ್ಮಗನಾಗಿ ಹುಟ್ಟಿ ಅಧರ್ಮಕ್ಕೆ ಕೈ ಹಾಕುವುದಕ್ಕೆ ಹಿಂದೇಟು ಹಾಕಿತು. | |
| 25. | ಬ್ರಿಟಿಷರು ಭಾರತೀಯರ ಮೇಲೆ ವಿಧಿಸಿದ ನಿಶ್ಶಸ್ತ್ರೀಕರಣದ ಹುಕುಮನ್ನು ವಿರೋಧಿಸಿ, ಹಲಗಲಿಯ ರಾಮ, ಬಾಲ, ಹನುಮ, ಜಡಗ ಮೊದಲಾದ ವೀರರು ತಮ್ಮಲ್ಲಿರುವ ಆಯುದ್ಧಗಳನ್ನು ಕೊಡಲೊಪ್ಪದೆ ಗುಮಾಸ್ತನ ಕಪಾಳಕ್ಕೆ ಬಡಿದರು. ಇದರಿಂದ ಕ್ರೋಧಗೊಂಡು ದಂಡು ಕಳುಹಿಸಿ, ದಂಗೆ ಎದ್ದವರನ್ನು ಬಗ್ಗು ಬಡಿಯಿತು, ಕುಂಪಣಿ ಸರ್ಕಾರ. | |
| 26. | ಚಂಚಲ ಮನಸ್ಸು ಮರವನ್ನೇರಿದ ಮರ್ಕಟನಂತೆ, ಕೊಂಬೆಯಿಂದ ಕೊಂಬೆಗೆ ಹಾಯುತ್ತಲಿದೆ. ಬೆಂದ ಮನಸ್ಸು ವಿಷಯಾಸಕ್ತಿಯಲ್ಲಿ ಮುಳುಗಿ ಹೋಗುವುದರಿಂದ ನಂಬಲಿಕ್ಕೆ ನೆಚ್ಚಲಿಕ್ಕೆ ಸಾಧ್ಯವಿಲ್ಲ. ಹಾಗೆ ಸ್ವಭಾವವೂ ಕೂಡ ಅಂದಣವನೇರಿದ ಸೊಣಗನಂತೆ, ಪಲ್ಲಕ್ಕಿಯಲ್ಲಿಯೇ ಕುಳಿತಿದ್ದರೂ ಸೊಣಗ ತನ್ನ ಮುನ್ನಿನ ಸ್ವಭಾವವನ್ನು ಬಿಡುವುದಿಲ್ಲ. | |
| 27. | ಶ್ರೀರಾಮನು, ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು, ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ಭುಜಬಲ ಪರಾಕ್ರಮಿಗಳಾದ ರಾಜರು ಹೆದರಿ, ನಮಸ್ಕರಿಸಿ ಮುಂದೆ ಬಿಡಲು, ದೇಶದೇಶಗಳನ್ನು ಸುತ್ತಾಡಿದ ಅಶ್ವಮೇಧದ ಕುದುರೆ, ವಾಲ್ಮೀಕಿ ಆಶ್ರಮದ ಹಸಿರನ್ನು ಕಂಡು ಅಲ್ಲಿಗೆ ಪ್ರವೇಶಿಸುತ್ತದೆ. | |
| 28. | 'ನನ್ನಾಸೆ' ಪದ್ಯದಲ್ಲಿ ಕವಯಿತ್ರಿ ಅಳುವ ಕಂದನ ನಗಿಸಲು, ಅಮ್ಮನ ಕಂಠದ ಜೋಗುಳ ನಾನಾಗಬೇಕು. ಮಾನವನ ಅಜ್ಞಾನತೆ ತೊಲಗಿಸಲು ವಾಗ್ದೇವಿಯ ಕೈಯಲ್ಲಿಯ ಗ್ರಂಥ ನಾನಾಗಿ ಧನ್ಯಳಾಗಬೇಕು ಎಂದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ನಮ್ಮ ದೇಶದಲ್ಲಿ ವಿಜ್ಞಾನಿಗಳು ಹಲವಾರು ಸಂದರ್ಭಗಳಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಿರುವುದು ದುರದೃಷ್ಟಕರ. ಅವರು ಪ್ರಯೋಗಶಾಲೆಯಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನು ವೈಜ್ಞಾನಿಕ ಮನೋಭಾವವನ್ನು ಪ್ರದರ್ಶಿಸುತಾರೆ. ಆದರೆ ನಿಜಜೀವನದಲ್ಲಿ ಅವರ ಯೋಚನಾಶಕ್ತಿ 'ರಜೆ' ತೆಗೆದುಕೊಂಡಿದೆಯೋ ಎಂಬಂತೆ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ. | |
| 30. | ಪಂಪನಿಗೆ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿದ್ದರೂ ಶತಮಾನಗಳ ಕಾಲ ಉಳಿಯುತ್ತದೆಂದು ತಿಳಿದಿರಬಹುದು ಅಥವಾ ಭರತನ ದಿಗ್ವಿಜಯ ಶಾಸನವನ್ನು ಕೆತ್ತಿಸುವ ಪ್ರಸಂಗವನ್ನು ಅದ್ಭುತವಾಗಿ ನಿರೂಪಿಸಿದ ಮೇಲೆ ಬಂಡೆಯ ಮೇಲೆ ಹೆಸರು ಕೆತ್ತಿಸುವುದು ವ್ಯರ್ಥ ಎಂಬ ಭಾವನೆ ಪಂಪನಿಗೆ ಉಂಟಾಗಿರಬಹುದು. | |
| 31. | ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಿಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿ, ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ. ನಂತರ ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿರಿ ಎಂಬ ತೃಪ್ತಿ ದೊರಕುತ್ತದೆ. ಇದು ವಿವೇಕಾನಂದರ ಅಭಿಪ್ರಾಯವಾಗಿದೆ. | |
| 32. | "ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು ಅದು ಒಂದು ಗಿಡದ ಪರಿಕಾರ ಎಲೆಬಾಲೆ ಬಾಲೆ ನಮ್ಮರ್ಥ ಒಡೆದ್ದೇಳೆ." | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕವಿ, ಆಕರ ಮತ್ತು ಪಠ್ಯ | 1 ಅಂಕ |
| | ಸಂದರ್ಭ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ"<br>ಪ್ರಸ್ತುತ ಹೇಳಿಕೆಯನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ವಿರಚಿತ ಅಮೆರಿಕದಲ್ಲಿ ಗೊರೂರು ಎಂಬ ಪ್ರವಾಸ ಕಥನದಿಂದ ಆಯ್ದ ಅಮೆರಿಕದಲ್ಲಿ ಗೊರೂರು ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಗೊರೂರರು ಹಾಗೂ ಅವರ ಹೆಂಡತಿ ಅಮೆರಿಕದ ಅವರ ಮಗಳ ಮನೆಯಲ್ಲಿ ಉಳಿದುಕೊಂಡಿದ್ದ ಸಂದರ್ಭದಲ್ಲಿ, ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ವಿದ್ಯುತ್ ಒಲೆಯಿಂದಾದ ತೊಂದರೆಯನ್ನು, ಅಲ್ಲಿನ ಶಾಲೆಯ ಉಪಾಧ್ಯಾಯರಿಗೆ ಹೇಳುತ್ತಾ, ನನಗೆ ಅಭ್ಯಾಸವಿಲ್ಲ ನಿಮ್ಮ ವಿದ್ಯಾರ್ಥಿಗಳ ಪೈಕಿ ಈ ವಿಷಯ ಗೊತ್ತಿರುವವರು ಯಾರಾದರೂ ಬಂದು ಒಂದು ಗಳಿಗೆ ನೋಡಿ ಸರಿಪಡಿಸುವರೇ ? ಎಂದಾಗ ಉಪಾಧ್ಯಾಯರು ಹುಡುಗರ ಪೈಕಿ ಬಲಿಷ್ಠನಾದವನನ್ನು ಕರೆದು ಮೇಲಿನ ಮಾತನ್ನು ಹೇಳುತ್ತಾರೆ.<br>ಪ್ರಸ್ತುತ ವಾಕ್ಯವು ಪಾಶ್ಚಾತ್ಯರಲ್ಲಿ ವಿದ್ಯುದೀಕರಣದ ಜ್ಞಾನವು ಮಕ್ಕಳಾದಿಯಾಗಿ ಎಲ್ಲರೂ ತಿಳಿದಿರುತ್ತಾರೆ ಎಂಬ ಅಂಶದ ಜೊತೆಗೆ, ಸಹಾಯ ಹಸ್ತವನ್ನು ನೀಡುವ ಅವರ ಗುಣ ಸ್ವಭಾವವನ್ನು ತಿಳಿಸುತ್ತದೆ. | |
| 34. | "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"<br>ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ವಿರಚಿತ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಎಂಬ ಸಂಶೋಧನಾ ಗ್ರಂಥದಿಂದ ಆರಿಸಿದ 'ಭಾಗ್ಯಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯದಿಂದ ಆರಿಸಲಾಗಿದೆ.<br>ಈ ಮಾತನ್ನು ಲೇಖಕರು ಓದುಗರಿಗೆ ತಿಳಿಸುತ್ತಾರೆ.<br>ವಿಶ್ವೇಶ್ವರಯ್ಯನವರು 1884 ರಲ್ಲಿ ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿದರು.<br>ಪಂಜ್ರಾನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸಿ, ಯಶಸ್ಸುಗಳಿಸಿ ಮೇಲಾಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರು. ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ಅವರ ಸಾಧನೆಗೆ ಮತ್ತೊಂದು ಗರಿ ಸೇರಿಸಿದಂತಾಯಿತು.<br>ವಿಶ್ವೇಶ್ವರಯ್ಯನವರ ಬೌದ್ಧಿಕಶಕ್ತಿ, ಮುಂದಾಲೋಚನೆ, ಕರ್ತವ್ಯ ನಿಷ್ಠೆಯನ್ನು ನಾವಿಲ್ಲಿ ಗುರುತಿಸಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 35. | "ಪೊನ್ನನೆಲ್ಲಮಂ ನೀನೆ ಕೊಂಡೆ" <br> ಪ್ರಸ್ತತ ವಾಕ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಗುಂಡ್ಮಿ ಚಂದ್ರಶೇಖರ ಐತಾಳರು ಗದ್ಯಾನುವಾದ ಮಾಡಿರುವ ದುರ್ಗಸಿಂಹ ಕವಿಯ ಕರ್ಣಾಟಕ ಪಂಚತಂತ್ರಂ ಎಂಬ ಕೃತಿಯಿಂದ ಆರಿಸಿದ 'ವೃಕ್ಷ ಸಾಕ್ಷಿ' ಗದ್ಯದಿಂದ ತೆಗೆದುಕೊಳ್ಳಲಾಗಿದೆ. <br> ಈ ಮಾತನ್ನು ದುಷ್ಟಬುದ್ಧಿಯು ಧರ್ಮಬುದ್ಧಿಗೆ ಹೇಳುತ್ತಾನೆ. <br> ವ್ಯಾಪಾರದಿಂದ ಗಳಿಸಿದ ಹೊನ್ನೆಲ್ಲವನ್ನು ಮನೆಯಲ್ಲಿ ಇಟ್ಟುಕೊಂಡು ಸ್ವೇಚ್ಛೆಯಾಗಿರಲು ಸಾಧ್ಯವಿಲ್ಲವಾದ್ದರಿಂದ, ವ್ಯಯಕ್ಕೆ ಬೇಕಾದ ಸ್ವಲ್ಪ ಹೊನ್ನನ್ನು ತೆಗೆದುಕೊಂಡು ಉಳಿದುದನ್ನು ಇಲ್ಲಿಯೇ ಅಶ್ವತ್ಥಮರದ ಸಮೀಪದಲ್ಲಿ ಹೂತಿಡೋಣ ಎಂಬ ಸಲಹೆಯನ್ನು ದುಷ್ಟಬುದ್ಧಿಯಿತ್ತನು. ನಂತರ ಧರ್ಮಬುದ್ಧಿಯನ್ನು ವಂಚಿಸಿ ದುಷ್ಟಬುದ್ಧಿಯೇ ಹೊನ್ನೆಲ್ಲವನ್ನು ಮುಂದಾಗಿ ತೆಗೆದುಕೊಂಡು ಕುಳಿಯನ್ನು ಮುಂಚಿನಂತೆಯೇ ಮುಚ್ಚಿ, ಧರ್ಮಬುದ್ಧಿಯಲ್ಲಿಗೆ ಬಂದು, ವ್ಯಯಕ್ಕೆ ಹೊನ್ನು ತರೋಣವೆಂದು ನಂಬಿಸಿ, ಅಲ್ಲಿ ಏನೂ ಇಲ್ಲದ್ದನ್ನು ಕಂಡು ಈ ಅಪವಾದ ತನ್ನ ಮೇಲೆ ಎಲ್ಲಿ ಬರುತ್ತದೋ ಎಂಬ ದುರಾಲೋಚನೆಯಿಂದ ಈ ಮೇಲಿನ ಮಾತನ್ನು ಹೇಳುತ್ತಾನೆ. <br> ದುರಾಸೆಗೆ ಒಳಗಾದವರು ಎಂಥ ನೀಚ ಕೆಲಸಕ್ಕೂ ಹಿಂದೇಟು ಹಾಕುವುದಿಲ್ಲ ಎಂಬ ಲೋಕ ನೀತಿ ಇಲ್ಲಿ ತಿಳಿದು ಬರುತ್ತದೆ. | |
| 36. | "ಹೊಸಗಾಲದ ಹಸು ಮಕ್ಕಳ ಹರಸಿ" <br> ಪ್ರಸ್ತುತ ಹೇಳಿಕೆಯನ್ನು ದ.ರಾ. ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದ ಆರಿಸಿದ 'ಹಕ್ಕಿ ಹಾರುತಿದೆ ನೋಡಿದಿರಾ' ಕವಿತೆಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. <br> ಕವಿ ಬೇಂದ್ರೆ ಅವರು ಕಾಲದಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನ ಮಾಡಿದ್ದಾರೆ. ಹಕ್ಕಿಯ ಹಾರುವಿಕೆ ಪ್ರಕೃತಿಯ ಸಹಜ ಕ್ರಿಯೆಯೊಂದಿಗೆ, ಯುಗ–ಯುಗಗಳು ಉರುಳಿ ಹೊಸ ಮನ್ವಂತರಕ್ಕೆ ಕಾಲಿಡುವ ಸಂದರ್ಭದಲ್ಲಿ, ಭವಿಷ್ಯದ ಮಕ್ಕಳನ್ನು ಹರಸುವ ಪರಿಯನ್ನು ಸಾಲುಗಳು ಪ್ರತಿಬಿಂಬಿಸುತ್ತವೆ. <br> ಹೊಸತನದ ಚೇತನದಿಂದ ಹೊಸಗಾಲದ ಹಸುಮಕ್ಕಳನ್ನು ಕಾಲಪಕ್ಷಿಯು ಹರಸುವುದನ್ನು ಇಲ್ಲಿ ಗುರುತಿಸಬಹುದು. | |
| 37. | "ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ" <br> ಪ್ರಸುತ್ತ ವಾಕ್ಯವನ್ನು ಡಾ।। ಬಿ.ಎಸ್. ಗದ್ದಗಿಮಠ ಅವರ ಕನ್ನಡ ಜನಪದಗೀತೆಗಳು ಕೃತಿಯಿಂದ ಆಯ್ದು ಸಂಪಾದಿಸಿದ ಹಲಗಲಿ ಬೇಡರು ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವ್ಯಾಪಾರಕ್ಕೆ ಬಂದಂತಹ ಬ್ರಿಟಿಷರು ದೇಶದ ಆಡಳಿತ ಚುಕ್ಕಾಣಿ ಹಿಡಿದರು. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ, ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಹುಕುಮನ್ನು ಹೊರಡಿಸಿದರು. ಸರಕಾರದ ಅನುಮತಿ ಇಲ್ಲದೆ ಆಯುಧಗಳನ್ನು ಭಾರತೀಯರು ಹೊಂದುವಂತಿರಲಿಲ್ಲ ಇದನ್ನು ವಿರೋಧಿಸಿ ನಡೆದ ದಂಗೆಗಳಲ್ಲಿ ಹಲಗಲಿ ಬೇಡರ ಹೋರಾಟವು ಪ್ರಮುಖವಾದದ್ದು. ಕುಂಪಣಿ ಸರ್ಕಾರದ ಆದೇಶದ ಮೇರೆಗೆ ಜನರಿಂದ ಆಯುಧಗಳನ್ನು ಬಲವಂತವಾಗಿ ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.<br>ವಾಕ್ಯವು ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯಕ್ಕೆ ಕನ್ನಡಿ ಹಿಡಿದಂತಿದೆ. | |
| 38. | "ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ"<br>ಪ್ರಸ್ತುತ ವಾಕ್ಯವನ್ನು ಫ.ಗು. ಹಳಕಟ್ಟಿ ಅವರು ಸಂಪಾದಿಸಿರುವ 'ದಾಸಿಮಯ್ಯನ ವಚನಗಳು' ಎಂಬ ಕೃತಿಯಿಂದ ಆಯ್ಕೆ ಮಾಡಿದ ಜೇಡರ ದಾಸಿಮಯ್ಯನ ವಚನವಾದ 'ವಚನ ಸೌರಭ'ದಿಂದ ಆರಿಸಲಾಗಿದೆ.<br>ಭಕ್ತಿ ಮತ್ತು ನಿಷ್ಠೆ ಬದುಕಿನ ವಿಶಿಷ್ಟ ಜೀವನ ಮೌಲ್ಯಗಳು. ನಿಷ್ಕಲ್ಮಶವಾದ ಭಕ್ತಿಯೇ ಸರ್ವಶ್ರೇಷ್ಠ. ಈ ಸಂದರ್ಭದಲ್ಲಿ ಮೇಲಿನ ಮಾತನ್ನು ವಚನಕಾರರು ಹೇಳುತ್ತಾ, ನಿಷ್ಠೆ ಉಳ್ಳಂತಹ ಭಕ್ತ ನಟ್ಟಡವಿಯಲ್ಲಿದ್ದರೂ ಅದು ಅವನಿಗೆ ಪಟ್ಟಣದಂತಿರುತ್ತದೆ. ಯಾರಲ್ಲಿ ನಿಷ್ಠೆ ಇಲ್ಲವೋ ಅಂತಹವರು ಪಟ್ಟದಲ್ಲಿದ್ದರೂ ಅದು ನಟ್ಟಡವಿ ಎಂದೆನಿಸುತ್ತದೆ.<br>ಭಕ್ತಿಯ ಸಾಕಾರಕ್ಕೆ ನಿಷ್ಠೆ ಮುಖ್ಯ. ಸಾತ್ವಿಕ ಬದುಕಿನ ಸಾರ್ಥಕತೆ, ದೃಢವಾದ ಸಾಮರಸ್ಯದ ಭಕ್ತಿ ಮತ್ತು ನಿಷ್ಠೆಯಿಂದ ಸಾಕ್ಷಾತ್ಕಾರವಾಗಬಲ್ಲದು. | |
| | **ಸಾಹಿತಿ / ಕವಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ವಿ.ಕೃ. ಗೋಕಾಕ್<br>ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ್ ಕ್ರಿ.ಶ. 1909ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಇವರು ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತಸಿಂಧುರಶ್ಮಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ದ್ಯಾವ ಪೃಥಿವೀ ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ ಇವರಿಗೆ ಲಭಿಸಿದೆ. ಇವರ ಸಮಗ್ರಸಾಹಿತ್ಯಕ್ಕಾಗಿ ಜ್ಞಾನಪೀಠ ಪ್ರಶಸ್ತಿಗೂ ಭಾಜನರಾಗಿದ್ದು, ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ಲಕ್ಷ್ಮೀಶ :<br>ಲಕ್ಷ್ಮೀಶ ಕವಿಯು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರಿಗೆ ಸೇರಿದವನು. ಈತನ ಕಾಲ ಕ್ರಿ.ಶ. 1550. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. ಇತನ ಕೃತಿ 'ಜೈಮಿನಿಭಾರತ'. ಕವಿ ಲಕ್ಷ್ಮೀಶನಿಗೆ ಉಪಮಾಲೋಲ, ಕರ್ಣಾಟಕವಿಚೂತವನಚೈತ್ರ ಎಂಬ ಬಿರುದುಗಳಿದ್ದವು. | |
| 41. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ನೀನುಳ್ಳೊಡೆಲ್ಲರೊಳರೆಮ<br>ಗೇನುಮಟಿಲ್ ಮನದೊಳಿಲ್ಲದೆಂತೆನೆ ಮಗನೇ<br>ಭಾನುವೆ ಸಾಲದೆ ಪಗಲೆನಿ<br>ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ<br>**ಅಥವಾ**<br>ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ<br>ಧುರಮೆ ಕಱುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ<br>ರ್ಮರನುಱಿವಂತೆ ನೀನುಱಿದೆಯಿನ್ನಿಱಿವನ್ನರುಮಿಲ ಮುತ್ತರುಂ<br>ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ | 1 × 4 = 4 |
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ಪ್ರಸ್ತುತ ಪದ್ಯಭಾಗವು ಕುಮಾರವ್ಯಾಸ ವಿರಚಿತ ಗದುಗಿನ ಭಾರದಿಂದ ಆರಿಸಿದ ಕೌರವೇಂದ್ರನ ಕೊಂದೆ ನೀನು ಪದ್ಯಕ್ಕೆ ಸಂಬಂಧಿಸಿದುದಾಗಿದೆ.<br>ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣ ಕರ್ಣನ ಜನ್ಮ ರಹಸ್ಯವನ್ನು ತಿಳಿಸಿ ಆತನಲ್ಲಿ ದ್ವಂದ್ವವನ್ನು ಉಂಟು ಮಾಡುತ್ತಾನೆ. ಶ್ರೀಕೃಷ್ಣನ ಯಾವ ರೀತಿಯ ಆಮಿಷಗಳಿಗೂ ಬಲಿಯಾಗದ ಕರ್ಣ, ರಾಜ್ಯದ ಸಿರಿಗೆ ಸೋಲುವವನು ನಾನಲ್ಲ ಹಾಗೆ ಕುಂತೀ ಪುತ್ರರು ಸುಯೋಧನರು ಎನಗೆ ಬೆಸಕೈವಲ್ಲಿ ಮನವಿಲ್ಲ. ಬದಲಿಗೆ ಹೊರೆದ ದಾತಾರನಿಗೆ ಹಗೆಯ ಶಿರವ ಕಡಿದು ತಂದೊಪ್ಪಿಸುವ ಉತ್ಸಾಹದಲ್ಲಿ ನಾನಿದ್ದೆ. ಆದರೆ ಕೃಷ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನೀನು ಜನ್ಮ ರಹಸ್ಯವನರುಹಿ ಕೌರವೇಂದ್ರನನ್ನು ಕೊಂದೆ ನೀನು ಎನ್ನುವಲ್ಲಿ ಹೊರೆದ ದಾತಾರನಾದ ದುರ್ಯೋಧನನ ಬಗ್ಗೆ ಕರ್ಣನಿಗಿದ್ದ ಅಕ್ಕರೆ, ಸ್ವಾಮಿನಿಷ್ಠೆ ಎದ್ದು ಕಾಣುವುದರ ಜೊತೆಗೆ ಅವನ ಅನ್ನದ ಋಣವನ್ನು ಯುದ್ಧದಿಂದಾದರೂ ತೀರಿಸುವ ವಾಂಛೆ ಎದ್ದು ಕಾಣುತ್ತದೆ. | |
| | ಉಪ್ಪಿಟ್ಟವನನ್ನು ಮುಪ್ಪಿನತನಕ ನೆನೆ ಎಂಬ ಮಾತನ್ನು ನೆನಪಿಸುವ ಕರ್ಣನ ಧರ್ಮ ಅತೀತವಾದದ್ದು, ಅನನ್ಯವಾದದ್ದು, ಎಂಬುದರಲ್ಲಿ ಎರಡು ಮಾತಿಲ್ಲ. | |
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | *ಶಬರಿಯ ಸಡಗರ ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾದ ಬಗೆ :* | |
| | ಮತಂಗರ ಆಶ್ರಮವಾಸಿಯಾದ ಶಬರಿ, ಗುರುಗಳ ಆಣತಿಯಂತೆ ರಾಮನಿಗಾಗಿ ಕಾದುಕಾದು ತಾಳುವಿಕೆಗಿಂತ ತಪವಿಲ್ಲ ಎಂಬ ಮಾತನ್ನು ತನ್ನ ಸಂಭ್ರಮ ಸಡಗರದ ಸಿದ್ಧತೆಯಲ್ಲಿ ನಿಜವಾಗಿಸುತ್ತಾಳೆ. ಶ್ರೀರಾಮನಿಗಾಗಿ ಹೊಸ ಹೂ ಹಣ್ಣುಗಳನ್ನು ವನದಿಂದ ಆಯ್ದು ಮಾಲೆಕಟ್ಟಿ, ರಾಮ ಇಂದು ಬರುವನು ನಾಳೆ ಬರುವನು ಎನ್ನುವಲ್ಲಿ ಕಳೆದವು ದಿನಗಳು, ಉರುಳಿದವು ವರುಷಗಳು. ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ, ದನುವಿನ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ, ಶಬರಿಗೆ ದರುಶನ ನೀಡುತ್ತಾರೆ. ಈಕೆಯ ಸಂತಸಕ್ಕೆ ಪಾರವಿಲ್ಲ. ರಾಮಲಕ್ಷ್ಮಣರ ಸನಿಯಕ್ಕೈದಿ ಮೈಯ ಸ್ಪರ್ಶಿಸಿ ಪಾದಮುಟ್ಟಿ ಕಣ್ಣಿಗೊತ್ತಿಕೊಂಡು ಕಂಬನಿದುಂಬಿದಳು. ಬನ್ನಿರಿ ಎಂದು ಗದ್ಗದಿಸುತ ಅಯ್ಯೋ ಏನೂ ಅಣಿಯೆ ಇಲ್ಲ ನಿನ್ನೆಯಷ್ಟು ಚೆನ್ನವಿಲ್ಲ ಎಂದು ಮರಗುತ್ತಾ ಬಗೆ ಬಗೆಯ ಕಂಪ ಸೂಸುವ ವನಮಾಲೆಯನ್ನು ಕೊರಳಿಗಿಟ್ಟು ಮಕ್ಕಳಂತೆ ಹಿಗ್ಗಿ ನಲಿಯುತ್ತಾಳೆ. ತಾನು ಆರಿಸಿ ತಂದ ಹಣ್ಣುಗಳಷ್ಟು ರುಚಿ ಜಗದೊಳಗೆಲ್ಲಿಯೂ ಇಲ್ಲ, ನಿನಗಾಗಿ ತಂದವೆಂಬ ಅಪರಿಮಿತ ಪ್ರೀತಿಯ ಸುಧೆಯನ್ನು ಸುರಿಸುತ್ತಾಳೆ. ತಾನೇ ಕೈಗಿತ್ತ ಹಣ್ಣುಗಳನ್ನು ತಿಂದು ಮಂದಹಾಸ ಬೀರಿದ ರಾಜಕುವರರನ್ನು ನೋಡಿ ಧನ್ಯತೆಯ ಭಾವ ತಳೆಯುತ್ತಾಳೆ. | |
| | ಹೀಗೆ ಮೇಳದವರು ತಮ್ಮ ಹಾಡಿನಲ್ಲಿ ಶಬರಿಯ ಸಡಗರವನ್ನು ವರ್ಣಿಸಿದ್ದಾರೆ. | |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಶಬರಿಯ ಚಿಂತೆ ಹಿಂಗಿ ಹೋಗಿ ಆಕೆಯ ಅಭೀಷ್ಟ ಸಿದ್ಧಿಸಿದ ಬಗೆ :* <br><br> ರಾಮನ ದರುಶನಕ್ಕಾಗಿ ಕಾದ ಶಬರಿ ಕೊನೆಗೂ ತಾನಿರುವೆಡೆಗೆ ತನ್ನ ನೆಚ್ಚಿನ ದೈವ ಬಂದಾಗ, ಹಗಲಿರುಳು ಹಂಬಲಿಸುತ್ತಿದ್ದ ಅವಳ ಮನಸ್ಸು ಸುಖದಲ್ಲಿ ತೇಲಾಡುತ್ತದೆ. ನಿನ್ನಾದರದಲ್ಲಿ ನಾವು ಕೂಡ ಸುಖಿಗಳೇ, ಕಾಡಿನಲ್ಲಿ ಈ ಸವಿ ಕಾಣುವ ಪುಣ್ಯಕೆ ನಿನಗೆಂದೆಂದಿಗೂ ನಾವು ಋಣಿಗಳು ಎಂದು ರಾಮನೆಂದಾಗ, ಕಂಬನಿದುಂಬಿ ನಿಮ್ಮಾಗಮನ ಬಲು ಸಂತಸವನೆನಗೆ ತಂದಿದೆ ಎಂದಾಗ ಕಣ್ಣೀರೇಕೆ ತಾಯಿ ಅಯೋಧ್ಯೆಯ ಅರಮನೆಗಿಂತ ಹೆಚ್ಚಿನ ಉಪಚಾರದ ಆದರದ ಪ್ರೀತಿಯನು ನೀ ತೋರಿರುವೆ. ಕಾಡು ಎಂಬುದ ಮರೆತು ಮನೆ ಇದೆ ಎಂಬ ಭಾವನೆ ಮೂಡಿಸಿರುವ ನಿನ್ನನ್ನು ಅಬ್ಬೆಯೆಂದೇ ತಿಳಿದೆವು ಎನ್ನುತ್ತಾನೆ ಶ್ರೀರಾಮ. ರೂಪದಂತೆ ಮಾತು ಕೂಡ ಮಧುರವಾಗಿದೆ. ಗುರುವ ಪೂಜೆಗೈದ ತಣಿವು ಸಂದಿತಿಂದೆ ಎನ್ನುತ್ತಾ ಸಿದ್ಧರೊರೆದ ಮಾತು ನನಗೆ ಸಿದ್ಧಿಯಾಯಿತಿಂದು ಎಂದು ನುಡಿಯುತ್ತಾ, ನನಗೆ ಮಾಯೆಯಾಚೆ ಪಯಣ ಬೆಳೆಸಲು ಭವ ಬಿಡಲು ಮನಸು ಕಾತರಿಸುತಿದೆ ಎಂದಾಗ, ಶ್ರೀರಾಮನು ಮಾತೆಯ ತೆರ, ನೀನೆಮ್ಮನಾದರಿಸಿ ಈ ರೀತಿ ನುಡಿವುದು ಸರಿಯಿಲ್ಲವೆನ್ನುವಾಗ, ಪುಣ್ಯಲೋಕ ದೊರೆಯಲೆಂದು ಹರಕೆಯಿಡೆನಗೆ, ಮುಕ್ತಿಯನ್ನು ಕರುಣಿಸು ಎಂದಾಗ, ಮನ ಒಪ್ಪಿದರೂ ಎದೆಯೊಪ್ಪದಲಾ ಎನ್ನುತ್ತಲೇ ಶ್ರೀರಾಮ ಆಕೆಯ ಮನದಿಚ್ಛೆಗೆ ಅಸ್ತು ಎನ್ನುತ ಪೋಗವ್ವಾ ನಿನ್ನಭೀಷ್ಟ ಸಿದ್ಧಿಗಾಗಿ ಎಂದು ಹಾರೈಸುತ್ತಾನೆ. | |
| 44. | *ಕವಿ ಶಿವರುದ್ರಪ್ಪನವರು ಆಶಯದಂತೆ ನಾವು ಕೈಗೊಳ್ಳಬೇಕಾದ ಸಂಕಲ್ಪಗಳು :* <br><br> ಕವಿ ಶಿವರುದ್ರಪ್ಪನವರು ಜೀವನದಲ್ಲಿ ಧನಾತ್ಮಕ ಭಾವನೆಯನ್ನು ದೃಢ ಸಂಕಲ್ಪವನ್ನು ಹೊಂದಿರಬೇಕು ಎಂದು ತಿಳಿಸುತ್ತಾ, ಸಮಾಜದ ಕತ್ತಲಿಗೆ, ಅಜ್ಞಾನ, ಅಂಧಕಾರಕ್ಕೆ ಪ್ರೀತಿಯ ಹಣತೆಯನ್ನು ಹಚ್ಚೋಣವೆನ್ನುತ್ತಾರೆ. ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಿಂದ ಮುನ್ನಡೆಸೋಣವೆನ್ನುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮುಂಗಾರ ಮಳೆ ಪ್ರಕೃತಿಯಲ್ಲಿ ಕಲುಷಿತಗೊಂಡ ನದಿ–ಜಲಗಳನ್ನು ಶುದ್ಧೀಕರಿಸುವಂತೆ, ಸಮಾಜದ ಕೊಳೆಯನ್ನು ತೊಳೆದು, ಬರಡು ಭೂಮಿಗೆ ವಸಂತಾಗಮನದ ನಾವೀನ್ಯತೆಯನ್ನು ತರೋಣವೆಂದಿದ್ದಾರೆ. | |
| | ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಹೊಸ ಭರವಸೆಗಳನ್ನು ಕಟ್ಟೋಣ. ಮನುಜರ ನಡುವೆ ಇರುವ ಅಹಂಕಾರ ಅಸಮಾನತೆ ಎಂಬೀ ಅಡ್ಡಗೋಡೆಗಳ ಕೆಡವುತ ಸೇತುವೆಯಾಗೋಣ ಎಂದಿದ್ದಾರೆ. | |
| | ಇರುವಂತಹ ಎಲ್ಲಾ ಮತಗಳು ಪಥಗಳೆನ್ನುವ ಎಚ್ಚರಿಕೆಯಲ್ಲಿ ಬದುಕ ಸಾಗಿಸುತ್ತಾ. ಭಯ–ಸಂಶಯದಿಂದ ಕಂದಿದ ಕಣ್ಣುಗಳಿಗೆ ಭವಿಷ್ಯದ ಕನಸನ್ನು ಬಿತ್ತೋಣವೆಂದಿದ್ದಾರೆ. | |
| | ***ಅಥವಾ*** | |
| | *ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯ :* | |
| | "ಹಿಂದೆ ಗುರುವಿದ್ದ, ಮುಂದೆ ಗುರಿಯಿತ್ತು ಸಾಗುತ್ತಿತ್ತು ಧೀರರ ದಂಡು" ಎಂಬ ವಾಕ್ಯ ಹಿಂದಿನ ತಲೆಮಾರಿನ ಯುವಕರಿಗಿದ್ದ ನೆಲೆಯನ್ನು ತಿಳಿಸುತ್ತದೆ. ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ, ಅರ್ಧ ಯಶಸ್ಸು ಪಡೆದಂತೆ. | |
| | ಸಮಾಜದ ಅಂಧಕಾರ ಮೌಢ್ಯಗಳಿಗೆ ಕವಿ ಪ್ರೀತಿಯ ಹಣತೆ ಹಚ್ಚಲು ತಿಳಿಸುತ್ತಾ, ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾಗಬೇಕೆಂದು ತಿಳಿಸುತ್ತಾರೆ. ಭೇದಭಾವಗಳನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲವರ್ಧಿಸುವುದರ ಜೊತೆಗೆ, ಯಶಸ್ಸು ಲಭಿಸುತ್ತದೆ. ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆಂದು ತಿಳಿಸುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 2 × 2 = 4 |
| | ಅ) ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ, ಮರ್ತ್ಯದಲ್ಲಿ ಹೇಗೋ ಬದುಕಿ ಸ್ವರ್ಗಕ್ಕೆ ತೂರಿಕೊಳ್ಳುವುದು ಸಾಧ್ಯವಿಲ್ಲ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ; ಅದನ್ನು ಇಲ್ಲೆ ಕಷ್ಟಪಟ್ಟು ಸಂಪಾದಿಸಬೇಕು. | |
| | ಆ) ಬಸವಣ್ಣನವರು ಸರ್ವಶೋಷಣೆಗಳಿಂದ ಮುಕ್ತವಾದ, ಸ್ವಾತಂತ್ರ್ಯ ಸಮಾನತೆ ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಕಟ್ಟಬಯಸಿದ್ದರು. | |
| | **ವಿಭಾಗ – 'ಬಿ'** | |
| | **(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 46. | (ಬಿ) ಸವರ್ಣದೀರ್ಘ ಸಂಧಿ | |
| 47. | (ಎ) ಸಾಮಾನ್ಯವಾಕ್ಯ | |
| 48. | (ಬಿ) ನೆಯ್ದುವಸ್ತ್ರ | |
| 49. | (ಸಿ) ಕಾಗದ | |
| 50. | (ಡಿ) ಮರದೊಳ್ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 51. | (ಎ) ಅವಧಾರಣಾರ್ಥಕಾವ್ಯಯ | |
| 52. | (ಬಿ) ಅರ್ಧವಿರಾಮ | |
| 53. | (ಸಿ) ವಿಜ್ಞಾನಿ | |
| 54. | (ಡಿ) ಸಂಭಾವನಾರ್ಥಕ | |
| 55. | (ಎ) ತದ್ಧಿತಾಂತ ಭಾವನಾಮ | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ಭೂಮಿ | |
| 57. | ದ್ವಿರುಕ್ತಿ | |
| 58. | ಬೀಯ | |
| 59. | ಮೇಲೆ | |
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | 3 × 1 = 3 |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |
| | ಭ \| ರ \| ನ \| ಭ \| ಭ \| ರ \| ಲ.ಗು<br>— U U \| — U — \| U U U \| — U U \| — U U \| — U — \| U —<br>ಚಾ ಗ ದ \| ಭೋ ಗ ದ \| ಕ್ಕ ರ ದ \| ಗೇ ಯ ದ \| ಗೊ ಟ್ಟಿ ಯ \| ಲಂ ಪಿ ನಂ \| ಪು ಗಳ್ | |
| | ಇದು ಅಕ್ಷರ ಗಣ ಛಂದಸ್ಸಿನ ಉತ್ಪಲಮಾಲಾ ವೃತ್ತದ ಲಕ್ಷ್ಯವಾಗಿದೆ. | |
| | ***ಅಥವಾ*** | |
| | ಸ \| ಭ \| ರ \| ನ \| ಮ \| ಯ \| ಲ.ಗು<br>U U — \| — U U \| — U — \| U U U \| — — — \| U — — \| U —<br>ಎ ನ ಗಂ \| ಪಾಂ ಡು ಗ \| ಮಿ ಲ್ಲ ಭೇ \| ದ ಮಿ ಳೆ \| ಯಂ ಪ ಚ್ಚಾ \| ಳ್ವ ಮಾ ಪಾಂ \| ಡು ನಂ | |
| | ಇದು ಅಕ್ಷರ ಗಣ ಛಂದಸ್ಸಿನ ಮತ್ತೇಭವಿಕ್ರೀಡಿತ ವೃತ್ತದ ಲಕ್ಷ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 61. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ನಾಲ್ಕು ಅಂಶಗಳನ್ನು ಗುರುತಿಸಿ ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತು ಅಥವಾ ಸನ್ನಿವೇಶಗಳಿಗೆ ಪರಸ್ಪರ ಹೋಲಿಕೆಯನ್ನು ಮಾಡಿ ವರ್ಣಿಸಿದ್ದರೆ ಅದು ಉಪಮಾಲಂಕಾರ ಎನಿಸುತ್ತದೆ.

*ಸಮನ್ವಯ* : ಉಪಮೇಯ : ಭೀಮ ದುರ್ಯೋಧನರು

ಉಪಮಾನ : ಮದಗಜಗಳು

ಉಪಮಾವಾಚಕ ಪದ : ಅಂತೆ

ಸಮಾನ ಧರ್ಮ – ಹೋರಾಟ

ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರನ್ನು 'ಉಪಮಾನ'ವಾದ ಮದಗಜಗಳಿಗೆ ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ಹೋರಾಟ' ಎಂಬ ಸಮಾನಧರ್ಮವು ಇರುವುದರಿಂದ ಇದು 'ಪೂರ್ಣೋಪಮಾಲಂಕಾರ' ಲಕ್ಷ್ಯವಾಗಿದೆ.

***ಅಥವಾ***

ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

*ಅಲಂಕಾರದ ಹೆಸರು* : ಉತ್ಪ್ರೇಕ್ಷಾಲಂಕಾರ

*ಲಕ್ಷಣ* : ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪ್ರೇಕ್ಷಾಲಂಕಾರ.

*ಸಮನ್ವಯ :*

*ಉಪಮೇಯ* : ಅಚ್ಛೋದ ಸರೋವರ

*ಉಪಮಾನ* : ರನ್ನಗನ್ನಡಿ

ಇಲ್ಲಿ ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಕಲ್ಪಿಸಿರುವುದರಿಂದ ಇದು 'ಉತ್ಪ್ರೇಕ್ಷಾಲಂಕಾರ'ವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 63. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |
| | *ಖಾಸಗಿ / ತಂದೆಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 64. | **ಪ್ರಬಂಧ ಬರೆವಣಿಗೆ :** | 1 × 5 = 5 |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧಕ್ಕೆ | 1 ಅಂಕ |
| | ಒಟ್ಟು | 5 ಅಂಕಗಳು |